<u>ಅಸಲು ದಾವಾ ಸಂಖ್ಯೆ: **-147/2018**</u> ಪಿ.ಡಬ್ಲ್ಯೂ**:-2**

ದಿನಾಂಕಃ **19.12.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಗೋವಿನಕೋವಿ ಗ್ರಾಮದಲ್ಲಿ ಮದುವೆ ಮಾಡಿಕೊಂಡಿರುತ್ತೇನೆ. ವಾದಿ ನನಗೆ ಅಳಿಯರಾಗಬೇಕು. ವಾದಿ ನನ್ನ ಹೆಂಡತಿಯ ತಂದೆಯ ತಮ್ಮನ ಮಗ. ವಾದಿಯು ಈ ದಾವೆಯನ್ನು ಪ್ರತಿವಾದಿ ಅಕ್ರಮವಾಗಿ ಆಸ್ತಿಯನ್ನು ಮಾಡಿಸಿಕೊಂಡಿದ್ದಾರೆ ಎಂದು ದಾವೆಯನ್ನು ಸಲ್ಲಿಸಿದ್ದಾರೆ. ವಾದಿಯು ಸರ್ವೇ ನಂ.164/3 ರ ಆಸ್ತಿಗೆ ಸಂಬಂಧಪಟ್ಟಂತೆ ಸಲ್ಲಿಸಿದ್ದಾರೆ. ದಾವಾ ಆಸ್ತಿಯ ಸರ್ವೇ ನಂಬರನ್ನು ನನ್ನ ಅತ್ತೆ ರತ್ನಮ್ಮ ತಿಳಿಸಿರುತ್ತಾರೆ. ನನ್ನ ಮಾವನ ಹೆಸರು ನಾಗೇಂದ್ರಚಾರಿ. ನನ್ನ ಹೆಂಡತಿಯ ತಂದೆ ಮತ್ತು ಅವರ ಅಣ್ಣ ತಮ್ಮಂದಿರಿಗೆ ಸಂಬಂಧಪಟ್ಟಂತೆ ಎಷ್ಟು ಆಸ್ತಿಗಳು ಇದ್ದವು ಎಂದರೆ ಸಾಕ್ಷಿಯು ದಾವಾ ಆಸ್ತಿಯನ್ನು ಹೊರತುಪಡಿಸಿ ಇನ್ನೊಂದು ಆಸ್ತಿ ಇರುತ್ತದೆ ಆದರೆ ಅದರ ನಂಬರ್ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ವಾದಿಯ ತಂದೆ ಮತ್ತು ನಮ್ಮ ಮಾವರ ಕುಟುಂಬದಲ್ಲಿ ಎಷ್ಟು ದಾವೆಗಳನ್ನು ಸಲ್ಲಿಸಿದ್ದರು ಮತ್ತು ಅದರಲ್ಲಿ ಎಷ್ಟು ದಾವೆಗಳು ವಜಾಗೊಂಡಿದೆ ಮತ್ತು ಎಷ್ಟು ದಾವೆಗಳು ಅವರ ಪರವಾಗಿ ಆಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿ, ಅವರ ಅಣ್ಣ ತಮ್ಮಂದಿರು ಮತ್ತು ಅವರ ಚಿಕ್ಕಪ್ಪಂದಿರು ಭಾಗಾಂಶ ಮಾಡಿಕೊಂಡಿಲ್ಲ ಎಂದು ಯಾವ ದಾಖಲೆಗಳ ಆಧಾರದ ಮೇಲೆ ಹೇಳುತ್ತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ದಾಖಲೆಗಳನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ವಾದಿಯ ತಂದೆ, ನನ್ನ ಮಾವ ನಾಗೇಂದ್ರಚಾರ್ ಮತ್ತು ಅವರ ಸಹೋದರಿಯರು ನ್ಯಾಯಾಲಯದಲ್ಲಿ ಭಾಗಾಂಶದ ದಾವೆಯನ್ನು ಸಲ್ಲಿಸಿ ಆಸ್ತಿಗಳು

ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಒಟ್ಟು ಕುಟುಂಬದ ಆಸ್ತಿಗಳನ್ನು ಭಾಗಾಂಶ ಮಾಡಿಕೊಂಡಿರುವ ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ನಮೂದು ಮಾಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ತಪ್ಪಾಗಿ ನಮೂದಾಗಿದೆ ಆದರೆ ಭಾಗಾಂಶ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಮಾವನ ಸಹೋದರರಲ್ಲಿ ವೀರಾಚಾರ್ ರವರು ವಿದ್ಯಾವಂತರಾಗಿದ್ದರು. ಶಾಮಚಾರ್, ನಾಗೇಂದ್ರಚಾರ್ ಮತ್ತು ಗಣೇಶಚಾರ್ ರವರು ಅವಿದ್ಯಾವಂತರಾಗಿದ್ದರು. ಶಾಮಚಾರ್ ಮತ್ತು ಗಣೇಶಚಾರ್ ರವರು ವಿದ್ಯಾವಂತರಾಗಿದ್ದರು ಸಹ ಅವಿದ್ಯಾವಂತರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ರಕರಣ ನಡೆದಾಗ ನಾನು ಪ್ರತ್ಯಕ್ಷ ಸಾಕ್ಷಿಯಾಗಿ ಅವರ ಜೊತೆಯಲ್ಲಿಯೇ ಇದ್ದೆ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ದಾವಾ ಆಸ್ತಿಯ ಜಮೀನಿನ ಖರೀದಿಯ ಪತ್ರವು ನೋಂದಣಿ ಆಗುವ ಸಮಯದಲ್ಲಿ ನಾನು ಕಚೇರಿಯ ಹೊರಗಡೆ ಇದ್ದೆ ಎಂದು ನುಡಿಯುತ್ತಾರೆ. ಸದರಿ ಪತ್ರವು 2008 ನೇ ಸಾಲಿನಲ್ಲಿ ಆಗಿರಬಹುದು. ಅದಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ. ಸದರಿ ಕ್ರಯ ಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಕ್ರಯ ಪತ್ರಕ್ಕೆ ವಾದಿಯ ತಂದೆಯವರು, ಅವರ ಅಣ್ಣ ತಮ್ಮಂದಿರು ಮತ್ತು ಚಿಕ್ಕಪ್ಪಂದಿರು ಸಹಿ ಮಾಡಿಲ್ಲ ಎಂದು ಯಾವ ದಾಖಲೆಯ ಆಧಾರದ ಮೇಲೆ ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದು ಮಾಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಕ್ರಯ ಪತ್ರ ನೋಡಿ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-1 ಕ್ರಯ ಪತ್ರದಲ್ಲಿ ರತ್ನಮ್ಮ ಕೋಂ ನಾಗೇಂದ್ರಚಾರಿ, ರತ್ನಮ್ಮ ಕೋಂ ಸಣ್ಣಚಾರಿ, ಗಣೇಶಚಾರಿ ಬಿನ್ ಬಸಪ್ಪ, ಶಾಮಚಾರಿ ಬಿನ್ ಬಸಪ್ಪ, ವೀರಾಚಾರಿ ಬಿನ್ ಬಸಪ್ಪ, ಇಂದ್ರಮ್ಮ ಕೋಂ ನಿಂಗಾಚಾರಿರವರು ಸಹಿ ಮಾಡಿದ್ದಾರೆ ಎಂದರೆ ಸರಿ. ರತ್ನಮ್ಮ ಮತ್ತು ಇಂದ್ರಮ್ಮ ಬಸಪ್ಪನ ಹೆಣ್ಣು ಮಕ್ಕಳು ಎಂದರೆ ಸರಿ. ನಿಪಿ-1 ರಲ್ಲಿರುವ ಗಣೇಶಚಾರಿ ಬಿನ್ ಬಸಪ್ಪರವರು ವಾದಿಯ ತಂದೆಯಾಗಬೇಕು. ಮೇಲ್ಕಂಡ ಎಲ್ಲರೂ ನಿಪಿ-1 ಕ್ರಯಪತ್ರಕ್ಕೆ ಸಹಿ ಮಾಡಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ವಾದಿಯ ಮಾತುಕೇಳಿಕೊಂಡು

ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ನನ್ನ ಹೆಂಡತಿಯ ಚಿಕ್ಕಪ್ಪನ ಮಗನಾಗಿದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.